**ಕರ್ನಾಟಕ ಸರ್ಕಾರ**
**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

# ಕರ್ನಾಟಕ ರಾಜಭಾಷಾ ಅಧಿನಿಯಮ, 1963

ಬೆಂಗಳೂರು :
ಸರ್ಕಾರಿ ಮುದ್ರಾಣಲಯದ ನಿರ್ದೇಶಕರಿಂದ ಮುದ್ರಿತವಾಗಿದೆ.

# ಕರ್ನಾಟಕ ರಾಜಭಾಷಾ ಅಧಿನಿಯಮ, 1963

## ವಿಷಯಾನುಕ್ರಮಣಿಕೆ


| ಪ್ರಕರಣಗಳು | | | ಪುಟಸಂಖ್ಯೆ |
|---|---|---|---|
| 1. | ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ | --- | 1 |
| 2. | ಕನ್ನಡವು ರಾಜ್ಯದ ರಾಜಭಾಷೆಯಾಗಿರುವುದು | --- | 1 |
| 3. | ಸರಕಾರವು ಬೇರೆ ರೀತಿ ನಿದೇಶಿಸುವವರೆಗೆ ಸರಕಾರೀ ಕಾರ್ಯಗಳಿಗಾಗಿ ಇಂಗ್ಲೀಷ್ ಉಪಯೋಗಿಸುವುದನ್ನು ಮುಂದುವರೆಸುವುದು | --- | 2 |
| 4. | ಕನ್ನಡವು ಉಪಯೋಗಿಸಲ್ಪಡಬೇಕಾಗಿರುವ ಸರಕಾರೀ ಕಾರ್ಯಗಳನ್ನು ಅಧಿಸೂಚಿಸಲು ಸರಕಾರದ ಶಕ್ತಿ | --- | 2 |
| 5. | ವಿಧಾನಮಂಡಲದಲ್ಲಿ ಇಂಗ್ಲೀಷ್ ಭಾಷೆಯ ಉಪಯೋಗವನ್ನು ಮುಂದುವರಿಸುವುದು. | --- | 2 |
| 5ಕ. | ಕೇಂದ್ರ ಮತ್ತು ರಾಜ್ಯ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರ | --- | 2 – 3 |
| 6. | 4ನೇಯ ಪ್ರಕರಣದ ಮೇರೆಗೆ ಹೊರಡಿಸಲಾಗುವ ಅಧಿಸೂಚನೆಗಳನ್ನು ವಿಧಾನ ಮಂಡಲದ ಮುಂದೆ ಇಡುವುದು. | --- | 3 |

**ಕರ್ನಾಟಕ ಅಧಿನಿಯಮ, 1963 ರ 26**

(1963ರ ಆಕ್ಟೋಬರ್ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿಸಲಾಗಿದೆ.)

## ಕರ್ನಾಟಕ ರಾಜಭಾಷಾ ಅಧಿನಿಯಮ, 1963

(1963ನೇ ಆಕ್ಟೋಬರ್ 5ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ.)

ರಾಜ್ಯದ ಸರ್ಕಾರೀ ಉದ್ದೇಶಗಳಿಗಾಗಿ ಉಪಯೋಗಿಸಬೇಕಾದ ಭಾಷೆಯೆಂದು ಕನ್ನಡವನ್ನು ಅಂಗೀಕರಿಸಲು ಮತ್ತು ರಾಜ್ಯದ ವಿಧಾನ ಮಂಡಲದ ವ್ಯವಹಾರದ ನಿರ್ವಹಣೆಗಾಗಿ ಇಂಗ್ಲೀಷಿನ ಉಪಯೋಗವನ್ನು ಮುಂದುವರಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಸಂವಿಧಾನವು ಪ್ರಾರಂಭವಾದಂದಿನಿಂದ ಹದಿನೈದು ವರ್ಷಗಳ ಅವಧಿಯು ಗತಿಸಿದ ತರುವಾಯ, ಕರ್ನಾಟಕ ರಾಜ್ಯದ ಸರ್ಕಾರೀ ಉದ್ದೇಶಗಳಿಗಾಗಿ ಉಪಯೋಗಿಸಬೇಕಾದ ಭಾಷೆಯೆಂದು ಕನ್ನಡವನ್ನು ಅಂಗೀಕರಿಸುವುದಕ್ಕಾಗಿ ಮತ್ತು ರಾಜ್ಯದ ವಿಧಾನಮಂಡಲದ ವ್ಯವಹಾರಗಳ ನಿರ್ವಹಣೆಗಾಗಿ ಇಂಗ್ಲೀಷಿನ ಉಪಯೋಗವನ್ನು ಮುಂದುವರಿಸುವುದಕ್ಕಾಗಿ ಉಪಬಂಧಿಸುವುದು ಯುಕ್ತವಾಗಿರುವುದರಿಂದ;

**1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ :–** (1) ಈ ಅಧಿನಿಯಮವನ್ನು ಕರ್ನಾಟಕ ರಾಜಭಾಷಾ ಅಧಿನಿಯಮ, 1963 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

**2. ಕನ್ನಡವು ರಾಜ್ಯದ ರಾಜಭಾಷೆಯಾಗಿರುವುದು :–** ಕನ್ನಡವು ಕರ್ನಾಟಕ ರಾಜ್ಯದ ರಾಜಭಾಷೆಯಾಗಿ ಇರತಕ್ಕದ್ದು.

**3. ಸರ್ಕಾರವು ಅನ್ಯಥಾ ನಿರ್ದೇಶಿಸುವವರೆಗೆ ಸರ್ಕಾರೀ ಉದ್ದೇಶಗಳಿಗಾಗಿ ಇಂಗ್ಲೀಷ್ ಉಪಯೋಗಿಸುವುದನ್ನು ಮುಂದುವರಿಸುವುದು :–** ರಾಜ್ಯ ಸರಕಾರವು, 4ನೇ ಪ್ರಕರಣದ ಮೇರೆಗಿನ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಿದ ಯಾವುದಾದರೂ ಸರ್ಕಾರೀ ಉದ್ದೇಶಗಳ ಸಂಬಂಧದಲ್ಲಿ ಅನ್ಯಥಾ ನಿದೇಶಿಸುವವರೆಗೆ, 2ನೇ ಪ್ರಕರಣದಲ್ಲಿ ಏನೇ ಇದ್ದರೂ ಮತ್ತು ಸಂವಿಧಾನದ 346ನೇ ಮತ್ತು 347ನೇ ಅನುಚ್ಛೇದದ ಉಪಬಂಧಗಳಿಗೆ ಬಾಧಕವಾಗದಂತೆ, ಈ ಅಧಿನಿಯಮವು ಪ್ರಾರಂಭವಾಗುವ

ಮುಂಚೆ ರಾಜ್ಯದ ಯಾವ ಸರ್ಕಾರೀ ಉದ್ದೇಶಗಳಿಗಾಗಿ ಇಂಗ್ಲೀಷು ಭಾಷೆಯನ್ನು ಉಪಯೋಗಿಸಲಾಗುತ್ತಿದ್ದಿತೋ ಅವೆಲ್ಲಕ್ಕೂ ಅದನ್ನೇ ಉಪಯೋಗಿಸುವುದನ್ನು ಮುಂದುವರಿಸತಕ್ಕದ್ದು.

**4. ಯಾವ ಸರ್ಕಾರೀ ಉದ್ದೇಶಗಳಿಗೆ ಕನ್ನಡವನ್ನು ಉಪಯೋಗಿಸಬೇಕೆಂಬುದನ್ನು ಅಧಿಸೂಚಿಸಲು ಸರಕಾರದ ಶಕ್ತಿ :–** ರಾಜ್ಯ ಸರಕಾರವು, ಕಾಲಕಾಲಕ್ಕೆ ಸರಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸರ್ಕಾರೀ ಉದ್ದೇಶಗಳಿಗಾಗಿ ಮತ್ತು ಪ್ರದೇಶಗಳಲ್ಲಿ ಕನ್ನಡವನ್ನು ಉಪಯೋಗಿಸತಕ್ಕದ್ದೆಂದು ನಿರ್ದೇಶಿಸಬಹುದು.

5ಕ. **ಕೇಂದ್ರ ಮತ್ತು ರಾಜ್ಯ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರ :–** ರಾಜ್ಯಪಾಲರ ಆದೇಶದ ಮೇರೆಗೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟವಾದ

1) ಯಾವುದೇ ಕೇಂದ್ರಾಧಿನಿಯಮದ ಅಥವಾ ಸಂವಿಧಾನದ ಏಳನೇಯ ಅನುಸೂಚಿಯ iiiನೇಯ ಪಟ್ಟಿಯಲ್ಲಿ ಸೂಚಿಸಿದ ವಿಷಯಗಳ ಪೈಕಿ ಯಾವುದೇ ವಿಷಯದ ಸಂಬಂಧದಲ್ಲಿ ರಾಷ್ಟ್ರಪತಿಯಿಂದ ಪ್ರಖ್ಯಾಪಿತವಾದ ಯಾವುದೇ ಅಧ್ಯಾದೇಶದ ಅಥವಾ ಯಾವುದೇ ರಾಜ್ಯಾಧಿನಿಯಮದ ಅಥವಾ ರಾಜ್ಯಪಾಲನು ಮಾಡಿದ ಯಾವುದೇ ಅಧ್ಯಾದೇಶದ ಅಥವಾ ನಿಯಮಗಳ; ಅಥವಾ

2) ಸಂವಿಧಾನದ ಮೇರೆಗೆ ಅಥವಾ ಯಾವುದೇ ಕೇಂದ್ರಾಧಿನಿಯಮದ ಅಥವಾ ಯಾವುದೇ ರಾಜ್ಯಾಧಿನಿಯಮದ ಅಥವಾ ರಾಜ್ಯದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನು ಮೇರೆಗೆ ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದ ಇತರ ಪ್ರಾಧಿಕಾರಿಯು ಅಥವಾ ಅಧಿಕಾರಿಯು ಹೊರಡಿಸಿದ ಯಾವುದೇ ಆದೇಶದ, ನಿಯಮದ, ವಿನಿಯಮದ, ಅಥವಾ ಉಪವಿಧಿಯ;

ಕನ್ನಡ ಭಾಷಾಂತರವನ್ನು ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ಧಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅದರ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕುದು.

6. **4ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯನ್ನು ವಿಧಾನ ಮಂಡಲ ಮುಂದೆ ಇರಿಸುವುದು :–** 4ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದೇ ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನವು ಅಥವಾ ನಿಕಟೋತ್ತರದ ಅಧಿವೇಶನಗಳು ಮುಗಿಯುವ ಮೊದಲು ಆ ಅಧಿಸೂಚನೆಯಲ್ಲಿ ಯಾವುದಾದರೂ ಮಾರ್ಪಾಟು ಮಾಡುವದಕ್ಕೆ ಎರಡೂ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆಯನ್ನು ಹೊರಡಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಅಧಿಸೂಚನೆಯು ಸಂದರ್ಭಾನುಸಾರ ಅಂಥ ಮಾರ್ಪಾಟದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕಲ್ಲಿ ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆಯ ಮೇರೆಗೆ ಆ ಹಿಂದೆ ಮಾಡಿದ ಯಾವುದೇ ಕಾರ್ಯದ ವಿಧಿಮಾನ್ಯತೆಗೆ ಬಾಧೆಯುಂಟು ಮಾಡತಕ್ಕದ್ದಲ್ಲ.

* * * * *

(ಕರ್ನಾಟಕ ಸರ್ಕಾರದಿಂದ ಪ್ರಕಟಿತ)
ಭಾನಿ 20/ ರಾಶಾಶಾ/ 2009